CW.1 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1675/2023

| | |
|---|---|
| ಸಾಕ್ಷಿದಾರರ ಹೆಸರು | ಚಂದನ್ |
| ತಂದೆಯ ಹೆಸರು | ಚಿಕ್ಕಣ್ಣ |
| ವಯಸ್ಸು | 33 ವರ್ಷ |
| ವೃತ್ತಿ | ಉಪ ವಲಯ ಅರಣ್ಯಾಧಿಕಾರಿ, ಚಿಂತಾಮಣಿ |
| ವಿಳಾಸ | ಚಿಂತಾಮಣಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 09.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 2019 ರಿಂದ 2025 ರವರೆಗೆ ಕೋಡಿಹಳ್ಳಿ ವನ್ಯ ಜೀವಿ ವಲಯದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ಆರೋಪಿಯನ್ನು ನಾನು ನೋಡಿರುವುದಿಲ್ಲ.

ದಿಃ28.01.2020 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಕತ್ರಿಕೆರೆಯಿಂದ ವೀರಯ್ಯನದೊಡ್ಡಿ ಮಾರ್ಗದಲ್ಲಿ ಬೆಂಕಿ ರೇಖೆಯನ್ನು ನಿರ್ಮಾಣ ಮಾಡುತ್ತಿದ್ದ ಸಮಯದಲ್ಲಿ ಎರಡು ನಾಡ ಬಾಂಬುಗಳು ನಮಗೆ ಸದರಿ ಸ್ಥಳದಲ್ಲಿ ಸಿಕ್ಕಿರುತ್ತವೆ. ನನ್ನ ಜೊತೆ ಸದರಿ ದಿನ ನಮ್ಮ ಸಿಬ್ಬಂದಿಯಾದ ಚಾಸಾ-2 ಮತ್ತು 3 ರವರು ಹಾಜರಿದ್ದು ಇದನ್ನು ಗಮನಿಸಿರುತ್ತಾರೆ. ಸದರಿ ಜಾಗವೂ ಅರಣ್ಯ ಒತ್ತುವರಿ ಜಾಗವಾಗಿದ್ದು ಅದರ ಪಕ್ಕದಲ್ಲೇ ಒಂದು ಗುಡಿಸಲು ಕಂಡು ಬಂದಿದ್ದು ಅಲ್ಲಿ ಪರಿಶೀಲನೆ ಮಾಡಿದಾಗ ಒಂದು ಬಿಳಿ ಚೀಲದಲ್ಲಿ ತಂತಿ ಬುಟ್ಟಿ ಲಭ್ಯವಿದ್ದು ಅದರಲ್ಲಿ 13 ನಾಡ ಬಾಂಬುಗಳು ಕಂತು ಬಂದಿತು. ಒಟ್ಟು 15 ನಾಡ ಬಾಂಬುಗಳನ್ನು ನಾವು ಸದರಿ ಸ್ಥಳದಲ್ಲಿ ಪತ್ತೆ ಮಾಡಿದ್ದು ನಂತರ ಸದರಿ ಗುಡಿಸಲು

ಯಾರಿಗೆ ಸೇರಿದ್ದು ಎಂದು ಪಕ್ಕದ ಜಮೀನಿನವರ ಬಳಿ ವಿಚಾರಣೆ ಮಾಡಲಾಗಿ ಅದು ನಾಗರಾಜು ಬಿನ್ ಈರಬೋವಿ ಇವರಿಗೆ ಸಂಬಧಿಸಿದ್ದು ಎಂದು ತಿಳಿಸಿರುತ್ತಾರೆ.

ನಂತರ ಸದರಿ ಸ್ಥಳದಲ್ಲಿ ಸದರಿ 15 ನಾಡ ಬಾಂಬುಗಳನ್ನು ಅಮಾನತು ಪಡಿಸಿಕೊಂಡು ನಂತರ ಅದನ್ನು ದಿ:29.01.2020 ರಂದು ಕೋಡಿಹಳ್ಳಿ ಪೋಲೀಸ್ ಠಾಣೆಗೆ ವಹಿಸಿಕೊಟ್ಟಿರುತ್ತೇವೆ. ನಂತರ ದೂರನ್ನು ಕೊಡುವಾಗ ಹಾಗೂ ಸದರಿ ವಸ್ತುಗಳನ್ನು ಅಮಾನತು ಪಡಿಸಿಕೊಳ್ಳುವ ಸಮಯದಲ್ಲಿ ಚಾಸಾ-4 ಮತ್ತು 5 ರವರು ಹಾಜರಿದ್ದರು. ಪೋಲೀಸರು ದಿಃ30.01.2020 ರಂದು ಚಾಸಾ-6 ಮತ್ತು 7 ರವರನ್ನು ಕರೆಯಿಸಿಕೊಂಡು ನಮ್ಮಗಳ ಜೊತೆ ಸದರಿ ಸ್ಥಳಕ್ಕೆ ಹೋಗಿ ಪಂಚನಾಮೆಯನ್ನು ಮಾಡಿಸಿರುತ್ತಾರೆ. ಬೆಳಿಗ್ಗೆ 10 ರಿಂದ 10.45 ಗಂಟೆಯವರೆಗೂ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಸಮಯದಲ್ಲಿ ನಮ್ಮ ಸಿಬ್ಬಂದಿಗಳಾದ ಚಾಸಾ-6 ಮತ್ತು 7 ರವರು ಸ್ಥಳದಲ್ಲಿದ್ದರು. ನಂತರ ನಾಡಬಾಂಬುಗಳನ್ನು ಪಡುವಣಕೆರೆಯಲ್ಲಿ ಇರಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ದೂರನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಸ್ಥಳ ಮಹಜರ್ ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಅಮಾನತು ಮಹಜರ್ ನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಚಾಸಾ-2 ಮತ್ತು 3 ರವರನ್ನು ಕರ್ತವ್ಯಕ್ಕೆ ಹೊರಗುತ್ತಿಗೆಯ ಮೇಲೆ ತೆಗೆದುಕೊಂಡ ಬಗ್ಗೆ ಸಲ್ಲಿಸಿರುವ ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು

ಅದನ್ನು ಈಗ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಸದರಿ ಸ್ಥಳದ ಗೂಗಲ್ ಆರ್ಥ್ ನಿಂದ ಪಡೆದುಕೊಂಡಿರುವ ಮ್ಯಾಪಿನ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಜನವರಿ 2020 ರ ಸದರಿ ಅರಣ್ಯ ಸಿಬ್ಬಂದಿಯವರ ಹಾಜರಾತಿಯ ದಾಖಲೆಯನ್ನು ಹಾಜರು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ವನ್ಯಜೀವಿ ನಿರೀಕ್ಷಕ ಇವರ ವಾರದ ದಿನಚರಿ ದಿಃ26.01.2020 ರಿಂದ 02.02.2020 ರವರೆಗೂ ಸಂಬಂಧಿಸಿದ ದಾಖಲೆಯನ್ನು ಹಾಜರು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೇ ಸೂಕ್ತ ಕಾರಣ ನೀಡದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**